


# ಹಿಮಾಚಲದ ಶಕ್ತಿಪೀಠಗಳಲ್ಲಿ ಮೂರುದಿನ

ಸ್ವಾಮಿ ರಾಘವೇಶಾನಂದ

**ಹಿಮಾಚಲದಲ್ಲಿನ ಶಕ್ತಿಪೀಠಗಳ ದರ್ಶನಕ್ಕಾಗಿ ಕೈಗೊಂಡ ತೀರ್ಥಯಾತ್ರೆಯ ಒಂದು ನೈಜ ಅನುಭವದ ಚಿತ್ರಣವನ್ನು ನೀಡಿದ್ದಾರೆ ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿಯವರು.**

**ಆಧ್ಯಾತ್ಮಿಕ** ಜೀವನದಲ್ಲಿ ತೀರ್ಥಯಾತ್ರೆಗೆ ಮಹತ್ವ ಸ್ಥಾನವುಂಟು. ಪ್ರತಿ ವರ್ಷ ಬೇಲೂರು ಮಠಕ್ಕೆ ಹೋಗಿ, ಅಲ್ಲಿ ಶ್ರೀಶ್ರೀಗುರುಮಹಾರಾಜರ ದರ್ಶನ ಮಾಡಿ, ಎಲ್ಲಾ ಸಾಧುಗಳಿಗೆ ಪ್ರಣಾಮ ಸಲ್ಲಿಸಿ ಯಾವುದಾದರೂ ತೀರ್ಥ ಕ್ಷೇತ್ರಕ್ಕೆ ಹೋಗುವ ಪದ್ಧತಿ ನನ್ನದು. ಈ ಬಾರಿ ಹಿಮಾಚಲ ಪ್ರದೇಶದಲ್ಲಿರುವ ಶಕ್ತಿ ಪೀಠಗಳಿಗೆ ಹೋಗೋಣವೆಂದು ಒಂದು ಆಸೆಯಾಯಿತು. ಜೊತೆಯಲ್ಲೇ ಸ್ವಾಮಿ ವೀತಭಯಾನಂದಜೀ, ಸ್ವಾಮಿ ಸುಖಾತ್ಮಾನಂದಜಿ ಹಾಗೂ ಸ್ವಾಮಿ ಆತ್ಮಘನಾನಂದಜೀ ಅವರೂ ಸೇರಿದರು. ನಮ್ಮ ಯಾತ್ರೆ ನವದೆಹಲಿಯ ಮೂಲಕ ಚಂಡೀಘರ್‌ಗೆ ಹೋಗಿ ಅಲ್ಲಿಂದ ಶುರುವಾಯಿತು. ಹಿಮಾಚಲಕ್ಕೆ ಕಾಲಿಡುವ ಮುನ್ನ, ಚಂಡೀಘರ್‌ನಿಂದ ಸುಮಾರು ೬೦ ಕಿ.ಮೀ. ದೂರದಲ್ಲಿರುವ 'ಆನಂದಪುರ ಸಾಹೀಬ್' ಎನ್ನುವ ಸಿಖ್ಖರ ಒಂದು ಗುರುದ್ವಾರದಲ್ಲಿ ನಿಂತೆವು. ಇದೊಂದು ಅದ್ಭುತ ಸ್ಥಳ. ಸಾಧಾರಣವಾಗಿ ನಗರಗಳನ್ನು ರಾಜರು ಕಟ್ಟುತ್ತಾರೆ. ಆದರೆ ಈ ಊರು ೧೬೬೫ರಲ್ಲಿ ಸಿಖ್ ಗುರುಗಳಲ್ಲಿ ಒಬ್ಬರಾದ ಗುರು ತೇಜ್‌ಬಹಾದುರ್ ಸಾಹೀಬ್‌ರಿಂದ ಕಟ್ಟಲ್ಪಟ್ಟಿತು. ಇಲ್ಲಿಯ ವಿಶೇಷವೆಂದರೆ ಗುರು ಗೋವಿಂದ ಸಿಂಗ್‌ರು ಉಪಯೋಗಿಸಿದ ೧೨ ಅಸ್ತ್ರಗಳನ್ನು ಇಲ್ಲಿ ಇಟ್ಟು ಪೂಜೆ ಮಾಡಲಾಗುತ್ತಿದೆ. ಬೇರೆಲ್ಲಾ ಗುರುದ್ವಾರಗಳಂತೆ ಇಲ್ಲಿಯೂ 'ಗುರುಗ್ರಂಥ್ ಸಾಹೀಬ್' ಪುಸ್ತಕಕ್ಕೇ ಮುಖ್ಯ ಪೂಜೆ. ಇಲ್ಲೇ ಗುರುಗೋವಿಂದ ಸಿಂಗರು ಖಾಲ್ಸಾ ಪಂಥವನ್ನು ಶುರು ಮಾಡಿದುದು. ದೇವಸ್ಥಾನ ನೋಡಲು ಅತ್ಯಂತ ರಮಣೀಯವಾಗಿದೆ.

ಇಲ್ಲಿಂದ ನಮ್ಮ ಹಿಮಾಚಲ ಪ್ರದೇಶದ ಯಾತ್ರೆ ಶುರುವಾಯಿತು. ನಾವು ಮೊದಲು ದರ್ಶಿಸಿದ ಶಕ್ತಿಪೀಠ ಚಿಂತಾಪೂರ್ಣಿ. ಇದರ ವಿವರಣೆ ಕೊಡುವ ಮುನ್ನ ಶಕ್ತಿಪೀಠದ ಬಗ್ಗೆ ಎರಡು ಮಾತು ಹೇಳಬೇಕು.

ಒಮ್ಮೆ ದಕ್ಷ ಪ್ರಜಾಪತಿ ಹಿಮಾಲಯದಲ್ಲಿ ಒಂದು ದೊಡ್ಡ ಯಾಗವನ್ನು ಮಾಡಿದ. ಅವನ ಮಗಳು ದಾಕ್ಷಾಯಣಿ. ಅಳಿಯ ಪರಮೇಶ್ವರ. ಪರಮೇಶ್ವರನು ತನಗೆ ಸರಿಯಾಗಿ ಮರ್ಯಾದೆ ತೋರಿಸಲಿಲ್ಲವೆಂದು ದಕ್ಷನಿಗೆ ಅವನ ಮೇಲೆ ಬದ್ಧ ದ್ವೇಷ. ದಕ್ಷನು ಯಾಗಕ್ಕೆ ಎಲ್ಲಾ ದೇವ ದೇವತೆಗಳನ್ನು ಆಮಂತ್ರಿಸಿದ್ದರೂ, ಪರಮೇಶ್ವರನಿಗೆ ಆಹ್ವಾನ ಹೋಗಿರಲಿಲ್ಲ. ನಾರದ ಮಹರ್ಷಿಗಳು ಕೈಲಾಸಕ್ಕೆ ಬಂದು ಯಾಗದ ಎಲ್ಲಾ ಏರ್ಪಾಡುಗಳನ್ನೂ ರಸವತ್ತಾಗಿ ದಾಕ್ಷಾಯಣಿಗೆ ವಿವರಿಸಿದರು. ತನ್ನ ತಂದೆಯ ಮನೆಯಲ್ಲಿ, ಅಷ್ಟು ದೊಡ್ಡ ಯಾಗ ನಡೆಯುವುದನ್ನು ಕೇಳಿ, ಅವಳಿಗೂ ಹೋಗಲು ಆಸೆಯಾಯಿತು. ತನ್ನ ಪತಿಯ ಬಳಿ ಬಂದು ನಾವೂ ಹೋಗೋಣ ಎಂದಳು. ಆದರೆ ಆಹ್ವಾನವಿಲ್ಲದೆ ಹೋಗುವುದು ಅಷ್ಟು ಒಳ್ಳೆಯದಲ್ಲ ಎಂದು ಹೋಗಲು ನಿರಾಕರಿಸಿದ ಪರಮಶಿವ. ನಾನಾದರೂ ಹೋಗಿ ಬರುತ್ತೇನೆ ಎಂದು ದಾಕ್ಷಾಯಣಿ ಹೊರಟಳು. ಆದರೆ ಆ ಯಾಗಸಭೆಯಲ್ಲಿ ದಕ್ಷನು ಪರಶಿವನನ್ನು ಹೀನಾಮಾನವಾಗಿ ನಿಂದಿಸಿದ. ಅವಮಾನದಿಂದ ದಾಕ್ಷಾಯಣಿ ಆ ಅಗ್ನಿಕುಂಡದಲ್ಲೇ ಬಿದ್ದು ತನ್ನನ್ನು ತಾನೇ ದಹಿಸಿಕೊಂಡಳು. ಶಿವನ ಕೋಪಕ್ಕೆ ಹೆದರಿ, ಮುಂದೆ ಏನಾಗುವುದೋ ಎಂದು ಭಯದಿಂದ ದೇವತೆಗಳೆಲ್ಲಾ ತಮ್ಮ ಸ್ಥಾನಗಳಿಗೆ ಹೊರಟುಹೋದರು. ಯಜ್ಞ ಮುಗಿಯಲೇ ಇಲ್ಲ. ಶಿವನಿಗೆ ಈ ವಿಷಯ ತಿಳಿದ ತಕ್ಷಣ ರುದ್ರನ ರೂಪದಲ್ಲಿ ಆ ಯಾಗಶಾಲೆಗೆ ಬಂದು, ವೀರಭದ್ರನ ಆವೇಶದಲ್ಲಿ ದಕ್ಷನ ತಲೆಯನ್ನು ಕತ್ತರಿಸಿದ. ಅಗ್ನಿಕುಂಡದಲ್ಲಿ ಬಿದ್ದಿದ್ದ ದಾಕ್ಷಾಯಣಿಯ ದೇಹವನ್ನು ತನ್ನ ಹೆಗಲಿನ ಮೇಲೆ ಹಾಕಿಕೊಂಡು ಅತ್ತಿಂದಿತ್ತ ಸುತ್ತುತ್ತಾ ನರ್ತಿಸತೊಡಗಿದ. ಈ ಘೋರ ದೃಶ್ಯವನ್ನು ನೋಡಿದ ಋಷಿಗಳೂ ದೇವತೆಗಳೂ ಎಲ್ಲ ಹೆದರಿ, ಬಹುಶಃ ಮೂರು ಲೋಕಗಳೂ ನಾಶವಾಗಬಹುದು ಎಂದು ಎಣಿಸಿದರು. ಆಗ ಮಹಾವಿಷ್ಣುವು ಅವನನ್ನು ಶಾಂತಗೊಳಿಸಲು ಮೊದಲು ಬಾಣಗಳಿಂದ ಆ ದಾಕ್ಷಾಯಣಿಯ ದೇಹವನ್ನು ಕತ್ತರಿಸಲಾರಂಭಿಸಿದ. ಅವಳ ದೇಹದ ಭಾಗಗಳು ಒಟ್ಟು ೫೧ ಸ್ಥಾನಗಳಲ್ಲಿ ಬಿದ್ದವು. ಆ ೫೧ ಸ್ಥಾನಗಳನ್ನು ಶಕ್ತಿಪೀಠಗಳು ಎಂದು ಕರೆಯುತ್ತಾರೆ.

ಮತ್ತೆ ನಾವು ಭೇಟಿಯಿತ್ತ ಮೊದಲ ಶಕ್ತಿಪೀಠವಾದ ಚಿಂತಾಪೂರ್ಣಿಗೆ ಬರೋಣ. ಇಲ್ಲಿಯ ದೇವತೆಯನ್ನು 'ಛಿನ್ನ ಮಸ್ತಿಕಾ' ಎಂದು ಕರೆಯುತ್ತಾರೆ. ಅಂದರೆ ತಲೆ ಭಾಗವಿಲ್ಲದ ದೇವಿ. ರೂಢಿಯಲ್ಲಿ ಚಿಂತಾಪೂರ್ಣಿ ಎಂಬ ಹೆಸರಿದೆ. ಚಿಂತಾಪೂರ್ಣಿ ಅಂದರೆ, ಭಕ್ತರ ಎಲ್ಲಾ ಆಸೆಗಳನ್ನೂ ಪೂರೈಸುವ ದೇವಿ ಎಂದರ್ಥ. ಇಲ್ಲಿ ಜಗನ್ಮಾತೆಯ ಪಾದದ ಚೂರು ವಿಷ್ಣುವಿನಿಂದ ಕತ್ತರಿಸಲ್ಪಟ್ಟಾಗ ಬಿದ್ದಿತೆಂದು ಪ್ರತೀತಿ. ಇದಕ್ಕೆ ಚಿಂತಾಪೂರ್ಣಿ ಎಂದು ಹೆಸರು ಬರಲು ನಮ್ಮ ಪುರಾಣಗಳಲ್ಲಿ ಒಂದು ಕಥೆಯುಂಟು.



ಛಿನ್ನಮಸ್ತಿಕಾ ದೇವಸ್ಥಾನ

ಮಯಿದಾಸ ಎನ್ನುವವನು ತಾಯಿ ದುರ್ಗೆಯ ದೊಡ್ಡ ಭಕ್ತ. ಅವನಿಗೆ ಪ್ರಾಪಂಚಿಕ ಜೀವನದಲ್ಲಿ ಆಸಕ್ತಿಯಿರಲಿಲ್ಲ. ಅವನ ಅಣ್ಣ ತಮ್ಮಂದಿರೆಲ್ಲಾ ವ್ಯಾಪಾರಸ್ಥರು. ಅವರೆಲ್ಲಾ ಅವನನ್ನು ತುಂಬಾ ಕಡೆಗಣಿಸುತ್ತಿದ್ದರು.

ಒಮ್ಮೆ ಮಯಿದಾಸ ತನ್ನ ಹೆಂಡತಿಯ ಊರಿಗೆ ಹೋಗುತ್ತಿದ್ದ. ದಾರಿಯಲ್ಲಿ ಒಂದು ಆಲದಮರದ ಕೆಳಗೆ ವಿಶ್ರಾಂತಿಗಾಗಿ ಕುಳಿತ. ತುಂಬಾ ಆಯಾಸವಾಗಿದ್ದುದರಿಂದ ಅಲ್ಲೇ ಸ್ವಲ್ಪ ಹೊತ್ತು ಮಲಗಿ ಕೊಂಡ. ಆಗ ಅವನಿಗೆ ಒಂದು ಕನಸಾಯಿತು. ಕನಸಿನಲ್ಲಿ ಸುಂದರಿ ಯಾದ ಒಬ್ಬ ಪುಟ್ಟ ಬಾಲಿಕೆ ಕಾಣಿಸಿಕೊಂಡಳು. ಅವಳು ಬಹಳ ತೇಜಸ್ವಿಯಾಗಿ ದೇವತೆಯಂತಿದ್ದಳು ಮತ್ತು ತನ್ನ ಮುದ್ದಾದ ನುಡಿ ಗಳಿಂದ 'ನನಗೆ ಈ ಮರದ ಕೆಳಗೆ ಒಂದು ದೇವಸ್ಥಾನ ಕಟ್ಟು' ಎಂದಳು. ಅವನು ನಿದ್ರೆಯಿಂದೆದ್ದು ತನ್ನ ಮಾವನ ಊರಿಗೆ ಪಯಣ ಬೆಳೆಸಿದ. ಆದರೆ ಅವನ ಮನಸ್ಸೆಲ್ಲಾ ಆ ಕನಸಿನಿಂದ ತುಂಬಿತ್ತು. ತನ್ನ ಹೆಂಡತಿಯ ಊರಿನಿಂದ ಹಿಂದಿರುಗುವಾಗ ಮತ್ತೆ ಆ ಜಾಗದಲ್ಲಿ ನಿಂತ. ಆ ಕನಸು ಅವನನ್ನು ಮತ್ತೆ ಮತ್ತೆ ಬ್ಬಾಧಿಸಲಾರಂಭಿಸಿತು. ಕಣ್ಣು ಮುಚ್ಚಿ ತನ್ನ ಇಷ್ಟದೇವತೆಯನ್ನು ಪ್ರಾರ್ಥಿಸಲಾರಂಭಿಸಿದ. ಬಹಳ ಹೊತ್ತು ಧ್ಯಾನದಲ್ಲಿದ್ದಾಗ, ಸಿಂಹದ ಮೇಲೆ ಕುಳಿತು ಕೊಂಡಿರುವ ದುರ್ಗೆಯ ದರ್ಶನವಾಯಿತು.

ದುರ್ಗಾದೇವಿ ಮಯಿದಾಸನಿಗೆ ಹೇಳಿದಳು, 'ನೋಡು, ನಾನು ಈ ಮರದ ಕೆಳಗೆ ಬಹಳ ಕಾಲದಿಂದಿದ್ದೇನೆ. ವಿದೇಶೀಯರ ಆಕ್ರಮಣದಿಂದ, ತಮ್ಮ ದಾರಿದ್ರ್ಯದಿಂದ ನಿಧಾನವಾಗಿ ಜನ ನನ್ನನ್ನು ಮರೆತರು. ನಾನು ಈಗ "ಪಿಂಡೀರೂಪ"ದಿಂದ ಇಲ್ಲಿದ್ದೇನೆ. ನೀನು ಇನ್ನುಮೇಲೆ ಇಲ್ಲೇ ನೆಲಸಿ ನನ್ನನ್ನು ಚಿಂತಾಪೂರ್ಣಿ ಎಂಬ ಹೆಸರಿ ನಿಂದ ಪೂಜಿಸು. ನನ್ನನ್ನು ಪೂಜಿಸುವವರ ಚಿಂತೆಯನ್ನೆಲ್ಲಾ ಪರಿ ಹರಿಸುತ್ತೇನೆ' ಎಂದಳು. ಮಯಿದಾಸ ಕೈ ಮುಗಿದು ದೈನ್ಯದಿಂದ ಹೇಳಿದ, 'ತಾಯಿ, ನಾನೊಬ್ಬ ಬಡವ. ಯಾವ ಕೆಲಸಕ್ಕೂ ಬಾರದವನು. ಈ ಕಾಡಿನ ಮಧ್ಯೆ ಇದ್ದು ನಾನು ಹೇಗೆ ನಿನ್ನ ಸೇವೆ ಸಲ್ಲಿಸಲಿ?' ಜಗನ್ಮಾತೆ ಹೇಳಿದಳು, 'ಚಿಂತಿಸಬೇಡ. ಇಂದಿನಿಂದ ನನ್ನ ಕೃಪೆಯಿಂದ ನಿನಗೆ ಯಾವ ಭಯವೂ ಇರುವುದಿಲ್ಲ. ಈ ಗುಡ್ಡದ ಕೆಳಗೆ ಹೋಗು. ಅಲ್ಲಿ ಯಾವುದಾದರೂ ಒಂದು ದೊಡ್ಡ ಗುಂಡುಕಲ್ಲನ್ನು ಮೇಲೆತ್ತು. ಅದರ ಕೆಳಗೆ ಸಮೃದ್ಧಿಯಾಗಿ ನೀರು ಬರುತ್ತದೆ. ಆ ನೀರಿನಿಂದ ನನ್ನನ್ನು ಪೂಜಿಸು. ಅಲ್ಲದೆ ಇಲ್ಲಿಗೆ ಬರುವ ಭಕ್ತರನ್ನೂ ಹಾಗೆ ಪೂಜಿಸಲು ತಿಳಿಸು. ನಾನು ಅವರೆಲ್ಲರ ಕಾಮನೆಗಳನ್ನು ಪೂರೈಸುತ್ತೇನೆ.'

ಮಯಿದಾಸನ ಆನಂದಕ್ಕೆ ಪಾರವೇ ಇಲ್ಲ. ಅವನು ಗುಡ್ಡದ ಕೆಳಗೆ ಇಳಿದು ಒಂದು ಕಲ್ಲನ್ನು ಮೇಲೆತ್ತಿದ. ಆಶ್ಚರ್ಯ, ಬುಗ ಬುಗನೆ ಅಲ್ಲಿ ನೀರು ಬರಲಾರಂಭಿಸಿತು. ಆ ಕಲ್ಲನ್ನೇ ಹತ್ತಿರದಲ್ಲಿಟ್ಟು ಒಂದು ಗುಡಿಸಲು ಕಟ್ಟಿ, ಅಲ್ಲಿ ಪೂಜೆ ಆರಂಭಿಸಿದ. ಆ ನೀರು ಬಂದ ಸ್ಥಳ ಈಗ ಒಂದು ದೊಡ್ಡ ಕೊಳವಾಗಿದೆ. ಪಿಂಡೀ ರೂಪದಲ್ಲಿರುವ ಅಂದರೆ ಒಂದು ಗುಂಡುಕಲ್ಲಿನ ಆಕಾರದಲ್ಲಿರುವ ದೇವತೆಯನ್ನೇ ಎಲ್ಲರೂ ಆ ನೀರಿನಿಂದ ಈಗ ಪೂಜಿಸುತ್ತಾರೆ. ಇದು ಜಾಗೃತ ದೇವತೆ ಎಂದು ಪ್ರತೀತಿ. ಸಾವಿರಾರು ಜನ ಭಕ್ತರು ಇಲ್ಲಿಗೆ ಬರುತ್ತಾರೆ. ಈಗ ಒಂದು ಒಳ್ಳೆಯ ದೇವಸ್ಥಾನವೂ ಕಟ್ಟಲ್ಪಟ್ಟಿದೆ.

ಜನಗಳ ಅತೀವ ಭಕ್ತಿಯನ್ನು ವ್ಯಕ್ತಪಡಿಸುವ ಒಂದು ಘಟನೆಯನ್ನು ಇಲ್ಲಿ ನೋಡಿದೆವು. ಸುಮಾರು ೫೫-೬೦ ವರ್ಷದ ಸ್ತ್ರೀಯೊಬ್ಬಳು ಬಹುಶಃ ತನ್ನ ಮೊಮ್ಮಗನೊಡನೆ ಮೆಟ್ಟಲುಗಳನ್ನು ನಿಧಾನವಾಗಿ ಹತ್ತಿ ಬರುತ್ತಿದ್ದಳು. ಸುಮಾರು ೧೦೦ರಿಂದ ೧೫೦ ಮೆಟ್ಟಲು ಹತ್ತಬೇಕು. ಮೊಮ್ಮಗನ ವಯಸ್ಸು ಸುಮಾರು ಒಂದರಿಂದ ಒಂದೂವರೆ ವರ್ಷ. ಪುಟ್ಟ ಮುದ್ದಾದ ಮಗು. ಒಂದೊಂದು ಹೆಜ್ಜೆಗೂ ಅಜ್ಜಿ 'ಜೈ ಮಾತಾ ಕಿ ಜೈ' ಎಂದು ಹೇಳುತ್ತಿದ್ದಳು. ಪುಟ್ಟ ಮಗು ನಗುತ್ತಾ ಒಂದು ಮೆಟ್ಟಲು ಹತ್ತುತ್ತಿತ್ತು. ಅಜ್ಜಿ ನಮಗೆ ಹೇಳಿದಳು, 'ನಮ್ಮ ಮಗು ಹೀಗೇ ಸಂತೋಷದಿಂದ ಹತ್ತಿಬಿಡುತ್ತೆ. ಜಗನ್ಮಾತೆಯ ಕೃಪೆ ಅವನಮೇಲೆ ಪೂರ್ಣವಾಗಿದೆ.' *ಶ್ರದ್ಧಾಮಯೋಽಯಂ ಪುರುಷಃ* ಎಂಬ ಗೀತೆಯ ವಾಣಿ ನೆನಪಿಗೆ ಬಂದಿತು. ಈ ಸ್ಥಳ ಸಮುದ್ರಮಟ್ಟಕ್ಕಿಂತ ಸುಮಾರು ೨೪೮೫ ಅಡಿ ಮೇಲಿದೆ.

ಅಲ್ಲಿಂದ ಸುಮಾರು ೪೦ ಕಿ.ಮೀ. ದೂರದಲ್ಲಿರುವ ಜ್ವಾಲಾ ಮುಖಿ ಎನ್ನುವ ಇನ್ನೊಂದು ಶಕ್ತಿಪೀಠಕ್ಕೆ ಹೋದೆವು. ಇಲ್ಲಿ ಮಹಾ ಮಾತೆಯ ನಾಲಿಗೆ ಬಿದ್ದಿತೆಂದು ಪ್ರತೀತಿ. ಇಲ್ಲಿ ಮಹಾಶಿವನು ಭೈರವ ರೂಪದಿಂದ ಇರುವನು. ಇಲ್ಲಿ ಮಹಾಮಾತೆಯು ಜ್ವಾಲೆಯ ರೂಪ ದಲ್ಲಿ ಪ್ರತ್ಯಕ್ಷಗೊಂಡಿದ್ದಾಳೆ. ಇಲ್ಲಿ ಒಂದು ದೊಡ್ಡ ಬಂಡೆಯಿಂದ ೯ ಕಡೆ ಜ್ವಾಲೆ ನಿರಂತರವಾಗಿ ಹೊರಬರುತ್ತಿದೆ. ಇದನ್ನು ಯಾರೂ ಹತ್ತಿಸುವುದೂ ಇಲ್ಲ ಅಥವಾ ಯಾವ ಎಣ್ಣೆ ಬತ್ತಿಯೂ ಇಲ್ಲ. ಕಮ್ಮಾರನ ಅಂಗಡಿಯಲ್ಲಿ ತಿದಿ ಹಾಕಿದಾಗ ಹೇಗೆ ಜ್ವಾಲೆ ಬರು ತ್ತದೆಯೋ, ಅದೇ ರೀತಿಯಲ್ಲಿ ನಿರಂತರವಾಗಿ ದೀಪದೋಪಾದಿಯಲ್ಲಿ ಜ್ವಾಲೆ ಬರುತ್ತಲೇ ಇರುತ್ತದೆ. ಇದರಲ್ಲಿ ಒಂದು ಜ್ಯೋತಿಗೆ ಪೂಜೆ ನಡೆಯುತ್ತದೆ. ಈ ಆಶ್ಚರ್ಯಕರ ಜ್ವಾಲೆಯನ್ನು ನೋಡಲು, ಸಾವಿರಾರು ಜನ ಭಕ್ತರು ಬರುತ್ತಾರೆ. ಪಾಂಡವರು ತಮ್ಮ

ವನವಾಸಕಾಲದಲ್ಲಿ ಇಲ್ಲಿಗೆ ಬಂದಿದ್ದರೆಂದೂ, ಪುಟ್ಟ ದೇವಸ್ಥಾನ ಕಟ್ಟಿದರೆಂದೂ ಪ್ರತೀತಿ ಇದೆ. ಇಲ್ಲಿ ಹಾಡುವ ಒಂದು ಹಾಡಿನಲ್ಲಿ ಪಂಚ ಪಾಂಡವ ತೇರಾ ಭವನ ಬನಾಯಾ, ಅರ್ಜುನ್ ನೇ ಚಾಮರ ದುಲಾಯಾ ಎಂದು ಹಾಡುತ್ತಾರೆ. ಅಂದರೆ ಪಂಚ ಪಾಂಡವರು ನಿನ್ನ ದೇವಸ್ಥಾನ ಕಟ್ಟಿದರು, ಅರ್ಜುನನು ಚಾಮರ ಹಾಕಿದನು, ಎಂದು. ಇಲ್ಲಿ ಮುಖ್ಯ ಜ್ವಾಲೆ ದೇವಸ್ಥಾನದ ಮಧ್ಯದಲ್ಲಿದ್ದು, ಸುತ್ತ ಒಂದು ಬೆಳ್ಳಿಯ ಕವಚವಿದೆ. ಇದನ್ನು ಮಹಾಕಾಳಿ ದೇವತೆ ಎಂದು ಪೂಜಿಸುತ್ತಾರೆ. ಅಲ್ಲಿ ನಾವು ಪೂಜೆ ಮಾಡಿ, ಆ ಸುಂದರ ವಾತಾವರಣದಲ್ಲಿ ಕೆಲವು ಸಮಯ ಧ್ಯಾನ, ಜಪ ಮಾಡಿ, ತುಂಬಿದ ಮನಸ್ಸಿನಿಂದ ಅಲ್ಲಿಂದ ಹೊರಟೆವು.



ಚಾಮುಂಡಾ ನಂದಿಕೇಶ್ವರ ಧಾಮ

ನಮ್ಮ ಮುಂದಿನ ಕ್ಷೇತ್ರ ಅಲ್ಲಿಂದ ಸುಮಾರು ೫೩ ಕಿ.ಮೀ. ದೂರದ ವಜ್ರೇಶ್ವರಿ ದೇವಿಯದಾಗಿತ್ತು. ಇಲ್ಲಿ ದೇವತೆಯನ್ನು 'ಕಾಂಗ್ರಾ' ದೇವತೆ ಎಂದು ಕರೆಯುತ್ತಾರೆ. ಹಿಮಾಚಲದ ಶಕ್ತಿಪೀಠ ದರ್ಶನ ಯಾತ್ರೆಯಲ್ಲಿ ಇಲ್ಲಿಗೆ ಹೋಗದೆ ಹೋದರೆ ಬೇರೆಲ್ಲಾ ದೇವತೆಗಳ ಭೇಟಿಯೂ ಅಪೂರ್ಣ ಎಂಬ ಒಂದು ನಂಬಿಕೆಯಿದೆ. ಮುಸ್ಲಿಮರು ಹಲವು ಬಾರಿ ಇಲ್ಲಿ ದಾಳಿ ಮಾಡಿದ್ದರೂ, ದೇವಸ್ಥಾನಕ್ಕೆ ಯಾವ ಅಪಾಯವೂ ಆಗದೆ ಇದೆ. ಇಲ್ಲಿ ಜಗನ್ಮಾತೆಯ ವಕ್ಷಸ್ಥಳ ಬಿದ್ದಿತೆಂದು ಪ್ರತೀತಿ. ದಶಮಹಾವಿದ್ಯೆಯಲ್ಲಿ ಬರುವ ತಾರಾದೇವಿ ಇಲ್ಲಿಯ ದೇವತೆ.

ಮಹಮ್ಮದ್ ಘಜ್ನವೀ ಎಂಬ ಆಫ್ಘಾನಿಸ್ತಾನ್ ದರೋಡೆಕಾರನು ೧೦೧೯ ರಲ್ಲಿ ಈ ದೇವಸ್ಥಾನಕ್ಕೆ ದಾಳಿ ಇಟ್ಟು ಕೋಟ್ಯಂತರ ರೂಪಾಯಿಗಳ ಆಭರಣಗಳು ಮುಂತಾದುವನ್ನು ಲೂಟಿ ಮಾಡಿ ಹೋದನು. ದೇವಸ್ಥಾನದ ಎರಡು ಬೆಳ್ಳಿಯ ಬಾಗಿಲುಗಳನ್ನು ಕೊಂಡೊಯ್ದನು. ೧೯೪೨ರಲ್ಲಿ ಈ ಬಾಗಿಲುಗಳನ್ನು ಮತ್ತೆ ಪಡೆಯಲಾಯಿತು. ಅವು ಈಗಲೂ ಇವೆ.

ಅಲ್ಲಿಂದ ನಾವು ಸುಮಾರು ೨೦ ಕಿ.ಮೀ. ದೂರದಲ್ಲಿರುವ ಚಾಮುಂಡಾ ದೇವಿಯತ್ತ ಹೊರಟೆವು. ಇಲ್ಲಿ ಶಿವ-ಶಕ್ತಿಯ ದೇವಸ್ಥಾನವಿದೆ. ಇದನ್ನು ಚಾಮುಂಡಾ ನಂದಿಕೇಶ್ವರ ಧಾಮ ಎಂದು ಕರೆಯುತ್ತಾರೆ. ಇಲ್ಲಿಯ ಪ್ರಕೃತಿ ಸೌಂದರ್ಯ ಅದ್ಭುತ. ಇಲ್ಲಿಯ ಸ್ಮಶಾನಸ್ಥಳ ಹಲವಾರು ತಾಂತ್ರಿಕರ ಸಾಧನೆಯ ಪ್ರದೇಶ. ಚಾಮುಂಡಾದೇವಿಯ ಕಥೆಯನ್ನು ನಾವು ದೇವೀ ಮಹಾತ್ಮೆಯ ೭ನೆಯ ಅಧ್ಯಾಯದಲ್ಲಿ ಓದುತ್ತೇವೆ. ಈ ಸ್ಥಳದಲ್ಲೇ ಚಂಡ ಮುಂಡರನ್ನು, ಕಾಳಿಕಾರೂಪದಲ್ಲಿ ಕೊಂದುದೆಂದು ಪ್ರಸಿದ್ಧಿ. ಕಾಳಿಕೆಯು ಜಗನ್ಮಾತೆಯ ಪಾದದಲ್ಲಿ ಚಂಡ ಮುಂಡರ ತಲೆಗಳನ್ನು ಇಟ್ಟಾಗ, ಜಗನ್ಮಾತೆ ಪ್ರಸನ್ನಳಾಗಿ ಕಾಳಿಕೆಯನ್ನು, ನೀನು ಇನ್ನು ಮುಂದೆ ಇಲ್ಲೇ ನೆಲಸಿ ಜನಗಳ ಕಷ್ಟಗಳನ್ನು ಹೋಗಲಾಡಿಸು ಎಂದು ಆದೇಶವಿತ್ತಳು. ಇಲ್ಲಿ ಚಾಮುಂಡಾ ಎಂಬ ಹೆಸರಿನಿಂದ ಕಾಳಿಕೆಯನ್ನು ಪೂಜಿಸುತ್ತಾರೆ.

ಇಲ್ಲಿಯ ದೇವಸ್ಥಾನದ ಐತಿಹ್ಯ ಈ ರೀತಿಯಿದೆ. ಸುಮಾರು ೨೦೦ ವರ್ಷಗಳ ಹಿಂದೆ, ದೇವಿಯು ಒಬ್ಬ ಭಕ್ತನ ಕನಸಿನಲ್ಲಿ ಬಂದು, ಪಕ್ಕದಲ್ಲಿ ಹರಿಯುವ ನದಿಯಲ್ಲಿ ನನ್ನ ವಿಗ್ರಹವಿದೆ, ಅದನ್ನು ತಂದು ಪ್ರತಿಷ್ಠಾಪಿಸಿ ಪೂಜೆ ಮಾಡು ಎಂದು ಆದೇಶವಿತ್ತಳು. ಅಂತೆಯೇ ಆ ವಿಗ್ರಹ ಪ್ರತಿಷ್ಠಾಪಿಸಲ್ಪಟ್ಟು ಪೂಜಿಸಲ್ಪಡುತ್ತಿದೆ ಎಂದು ನಂಬಿಕೆ. ಈ ದೇವತೆ ಜಾಗ್ರತ ದೇವತೆಯೆಂದೂ ಭಕ್ತರ ಮನೋಕಾಮನೆಗಳನ್ನು ಈಡೇರಿಸುವಳೆಂದೂ ಜನರಲ್ಲಿ ಬಲವಾದ ನಂಬಿಕೆಯಿದೆ. ಆದುದರಿಂದಲೇ ಈ ದೇವಸ್ಥಾನ ಹಳ್ಳಿಯ ಜನರುಗಳಿಂದ ಯಾವಾಗಲೂ ತುಂಬಿರುತ್ತದೆ.

ಈ ಯಾತ್ರೆಗಳನ್ನು ಮುಗಿಸಿಕೊಂಡು ಮುಂದೆ ನಾವು ಬೌದ್ಧರ ಸ್ಥಳವಾದ ಧರ್ಮಶಾಲೆಗೆ ಹೋದೆವು. ಇಲ್ಲಿ ದಲಾಯ್‌ಲಾಮಾ ವಾಸಿಸುತ್ತಿದ್ದರು. ಅವರು ಒಂದು ಪಾಠಶಾಲೆಯ ವಾರ್ಷಿಕೋತ್ಸವದಲ್ಲಿ ಭಾಗವಹಿಸುತ್ತಿದ್ದರು. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಟಿಬೆಟಿಯನ್ ಜನ ಅಲ್ಲಿ ಸೇರಿದ್ದರು. ಅದೊಂದು ದೊಡ್ಡ ಮೇಳ. ಧರ್ಮಶಾಲೆಯ ಬೌದ್ಧವಿಹಾರ ತುಂಬಾ ಆಕರ್ಷಣೀಯ ಸ್ಥಳ. ಇದು ಸಮುದ್ರ ಮಟ್ಟಕ್ಕಿಂತ ಸುಮಾರು ೧೨೦೦ ಮೀಟರ್ ಮೇಲಿರುವ ಸ್ಥಳ. ಸಾಕಷ್ಟು ಛಳಿ ಇತ್ತು. ಧ್ಯಾನ ಮುದ್ರೆಯಲ್ಲಿ ಕುಳಿತಿರುವ ಬುದ್ಧನ ಲೋಹದ ಅತಿ ದೊಡ್ಡ ವಿಗ್ರಹ ಎಲ್ಲರ ಆಕರ್ಷಕ ಬಿಂದು. ಆ ದೇವಸ್ಥಾನದ ಹೊರಭಾಗದಲ್ಲಿ ಬೃಹದಾಕಾರದ ಕೊಳವೆಗಳನ್ನು ಉದ್ದಕ್ಕೆ ಅಲಂಕರಿಸಿದ್ದಾರೆ. ಅವುಗಳನ್ನು ಸುತ್ತುವ ಜಪಮಾಲೆ ಎನ್ನುತ್ತಾರೆ. ಭಕ್ತಾದಿಗಳು ಒಂದೊಂದು ಕೊಳವೆಯನ್ನೂ ತಿರುಗಿಸುತ್ತ ಒಂದು ಪ್ರದಕ್ಷಿಣೆ ಬರುತ್ತಾರೆ. ಅದನ್ನು ಮಣಿಚಕ್ರ ಎಂದೂ ಕರೆಯುತ್ತಾರೆ. ಒಂದೊಂದು ಮಣಿಚಕ್ರದ ಒಳಗಡೆ ಸಾವಿರಾರು ಓಂ ಮಣಿ ಪದ್ಮೇ ಹೂಂ ಎಂಬ ಮಂತ್ರ ಬರೆಯಲ್ಪಟ್ಟಿದೆ. ಒಂದು ಕೊಳವೆಯನ್ನು ಒಮ್ಮೆ ತಿರುಗಿಸಿದರೆ ಸಾವಿರದಷ್ಟು ಮಂತ್ರ ಜಪಮಾಡಿದ ಫಲ ಬರುತ್ತದೆ ಎಂದು ಪ್ರತೀತಿ. ಹಿಂದೂಗಳು, ಟಿಬೆಟನರು, ಬೌದ್ಧ ಭಿಕ್ಷುಗಳು, ಶ್ರದ್ಧೆಯಿಂದ ಅದನ್ನು ತಮ್ಮ ಕೈಯಿಂದ ತಿರುಗಿಸುತ್ತಿರುವುದನ್ನು ನೋಡಿದೆವು, ನಾವೂ ಹಾಗೇ ಮಾಡಿದೆವು. ಕಾಂಗ್ರಾ ಕಣಿವೆಯ ಪ್ರಕೃತಿ ಸೌಂದರ್ಯವನ್ನು ನೋಡಿ ಆನಂದಿಸುತ್ತಾ ಮತ್ತೆ ಚಂಡೀಘರ್‌ಗೆ ಹಿಂತಿರುಗಿ ನಮ್ಮ ಯಾತ್ರೆಯನ್ನು ಮುಗಿಸಿದೆವು. ✤